**ಸಾಕ್ಷಿಯನ್ನು ದಿಃ 17.12.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದಃ**

1. ದಾವಾ ಜಮೀನನ್ನು ನಾನು ಅಳತೆ ಮಾಡಿಸಿದ್ದೇನೆ. ಅದರ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.
2. ಈ ದಾವೆಯಲ್ಲಿ ಸರ್ಕಾರದ ಮುಖ್ಯ ಕಾರ್ದರ್ಶಿ ಮತ್ತು ಜಿಲ್ಲಾಧಿಕಾರಿಯವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಆ ಕಾರಣಕ್ಕೆ ಈ ದಾವೆ ಊರ್ಜಿತವಲ್ಲ ಎಂದರೆ, ಸರಿಯಲ್ಲ.
3. ಐಟಂ ನಂ.1 ರ ಸ.ನಂ.21/2 ರಲ್ಲಿ 4 ಎಕರೆ 30 ಗುಂಟೆ ಇದೆ.
4. ನಾನು ಐಟಂ ನಂ.1 ಮತ್ತು 2 ನ್ನು ಸಹ 2020 ರಲ್ಲಿ ಭೂಪರಿವರ್ತನೆ ಮಾಡಿಸಿದ್ದೇನೆ. ಭೂಪರಿವರ್ತನೆ ಮಾಡಿಸಿದ ನಂತರ ಸರ್ವೇ ನಂಬರ್ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿ.
5. ನಿವೇಶನ ಮಾಡಿಸುವ ಸಲುವಾಗಿ ಭೂಪರಿವರ್ತನೆ ಮಾಡಿಸಿರುತ್ತೇನೆ. ನಿವೇಶನವನ್ನು ಮಾಡಿಸಿರುವುದಿಲ್ಲ.
6. ಭೂಪರಿವರ್ತನೆ ಆದ ನಂತರ ಪಂಚಾಯತಿಗೆ ಖಾತೆ ಮಾಡಿಸಿಕೊಳ್ಳಲು ತೊಂದರೆ ಇತ್ತಾ ಎಂದರೆ, ನಗರ ಯೋಜನೆ ಆಗದೇ ಖಾತೆ ಮಾಡುವುದಿಲ್ಲ ಎಂದು ನುಡಿಯುತ್ತಾರೆ.
7. ಐಟಂ ನಂ.1 ರ ದಾವಾ ಆಸ್ತಿಯ ಪಶ್ಚಿಮಕ್ಕೆ ಗ್ರಾಮಠಾಣಾ ಆಸ್ತಿ ಇದೆ. ಅದು 11 ಎಕರೆ ಚಿಲ್ಲರೆ ಇರಬಹುದು. ಗ್ರಾಮಠಾಣಾ ಸರ್ಕಾರಿ ಜಾಗ ಎಂದರೆ, ಯಾರಿಗೆ ಸೇರಿದೆ ಎಂದು ನನಗೆ ಗೊತ್ತಿಲ್ಲ.
8. ಗ್ರಾಮಠಾಣಾ ಆಸ್ತಿಯನ್ನು ಲಪಟಾಯಿಸಲು ನೀವು ಸುಳ್ಳು ದಾವೆ ಹಾಕಿದ್ದೀರಾ ಎಂದರೆ ಸರಿಯಲ್ಲ.
9. ನಿಮ್ಮ ಸಮ್ಮುಖದಲ್ಲಿ ಪಂಚಾಯತಿಯವರು ಗ್ರಾಮಠಾಣಾ ಆಸ್ತಿ ಹಾಗೂ ನಿಮ್ಮ ಆಸ್ತಿಯನ್ನು ಅಳತೆ ಮಾಡಿದ್ದಾರೆ ಎಂದರೆ, ಸರಿಯಲ್ಲ.
10. ದಿಃ 23.10.2020 ರಂದು ಪಂಚಾಯತಿಯವರು ನಿಮಗೆ ಅಳತೆ ಮಾಡುವ ಸಲುವಾಗಿ ನೋಟೀಸು ಜಾರಿ ಮಾಡಿದ್ದು, ಅದನ್ನು ನೀವು ಸಹಿ ಮಾಡಿ ಪಡೆದಿರುತ್ತೀರಾ ಎಂದರೆ, ಸರಿಯಲ್ಲ.
11. ಪಂಚಾಯತಿ ಆಸ್ತಿಗೆ ಅತಿಕ್ರಮ ಪ್ರವೇಶ ನಿಷೇಧಿಸಲಾಗಿದೆ ಎಂದು ನಾಮಫಲಕ ಹಾಕಿದ್ದಾರೆ ಎಂದರೆ, ದಿಃ 26.08.2020 ರಂದು ಹಾಕಿರುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ